ಓ ಎಸ್ ನಂಃ 116/2016
ಡಿ ಡಬ್ಲ್ಯೂ ಃ 1

ದಿಃ 11.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ವಿ ಕೆ ವಕೀಲರಿಂದ :-**

ನಿಡಿ 7 ರ ಪಂಚಾಯತಿ ಪಾರಿಕತ್ ಜಮೀನಿನ ತಿದ್ದುಪಡಿ ಪತ್ರದ ಮೂಲ ಪ್ರತಿಯನ್ನು ಕರ್ನಾಟಕ ಗೃಹ ಮಂಡಳಿಗೆ ಸಲ್ಲಿಸಿರುತ್ತೇವೆ. ಚಲುವಯ್ಯ ಕರ್ನಾಟಕ ಗೃಹ ಮಂಡಳಿಯಲ್ಲಿ ಪರಿಹಾರದ ಹಣವನ್ನು ಪಡೆಯುವ ಉದ್ದೇಶದಿಂದ ಸದರಿ ದಾಖಲಾತಿಯನ್ನು ಕರ್ನಾಟಕ ಗೃಹ ಮಂಡಳಿಗೆ ಹಾಜರುಪಡಿಸಿರುತ್ತಾರೆ ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸುತ್ತೇನೆ. ನಿಡಿ 7 ರ ದಾಖಲಾತಿಗೆ ನಾನಾಗಲಿ ಅಥವಾ ನನ್ನ ಕುಟುಂಬದವರಾಗಲಿ ಸಹಿಯನ್ನು ಮಾಡಿರುವುದಿಲ್ಲ. ನಿಡಿ 7 ರ ಪಂಚಾಯತಿ ಪಾರಿಕತ್ ಜಮೀನಿನ ತಿದ್ದುಪಡಿ ಪತ್ರವು ನೋಂದಣಿ ಆಗಿರುವುದಿಲ್ಲ ಎಂದರೆ ಸರಿ. ನಿಡಿ 7 ರ ದಾಖಲಾತಿಯ ಒಕ್ಕಣೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಡಿ 7 ರ ಪ್ರಕಾರ ದಿಃ 01.06.1986 ರಂದು ನಾವುಗಳು ಅಣ್ಣ ತಮ್ಮಂದಿರುಗಳು ಸೇರಿ ಒಟ್ಟು ಕುಟುಂಬದಲ್ಲಿ ಪಂಚಾಯತಿ ಪಾರಿಕತ್ ನ್ನು ಮಾಡಿಕೊಂಡು ನಮ್ಮ ನಮ್ಮಗಳ ಭಾಗದ ಜಮೀನನ್ನು ಸುಖದಿಂದ ಅನುಭವಿಸಿಕೊಂಡು ಬರುತ್ತಿದೆ ಎಂಬುದಾಗಿ ಒಕ್ಕಣಿ ಇದೆ ಎಂದರೆ ಸರಿಯಲ್ಲ. ನಿಡಿ 7 ರ ದಾಖಲಾತಿಯಲ್ಲಿ ನಮ್ಮ ನಮ್ಮಗಳ ಅನುಭವದ ಪ್ರಕಾರ ಸದರಿ ಜಮೀನಿನ ಸರ್ವೆ ಸ್ಕೆಚ್ ಮಾಡಿಸುವಾಗ ನಮ್ಮ ನಮ್ಮಗಳ ಅನುಭವದಲ್ಲಿ ಅದಲು ಬದಲು ಕಂಡಿರುವುದರಿಂದ ಮೆಲ್ಕಂಡ ನಾವುಗಳು ಸೇರಿ ಈ ಪಂಚಾಯತಿ ಪಾರಿಕತ್ ನ ತಿದ್ದುಪಡಿಯನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತಿನ ಸರ್ವೆ ನಂ. ನ ವಿಚಾರಕ್ಕಾಗಿ ನಿಡಿ 7 ರ ದಾಖಲೆಯು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಡಿ 7 ದಾಖಲಾತಿಯು 2007 ರ ಇಸವಿಗೆ ಸಂಬಂಧಪಟ್ಟಿದ್ದು. ನಿಪಿ 30 ರ ಪ್ರಕಾರ ಚನ್ನಪ್ಪ ಬಿನ್ ನಾರಾಯಣಪ್ಪನವರಿಗೆ 2 ಎಕರೆ 34 ಗುಂಟೆ ಸಿಂಗರಪ್ಪ ಬಿನ್ ನರಸಿಂಯ್ಯನವರಿಗೆ 2 ಎಕರೆ 34 ಗುಂಟೆ, ಸರ್ವೆ ನಂ. 36 ದೋಣೇನಹಳ್ಳಿ ಗ್ರಾಮಕ್ಕೆ ಸೇರಿದ ಸ್ವತ್ತು ಅವರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿ ಮೋಸದಿಂದ ಖಾತೆ ಆಗಿದೆ ಎಂದು ನುಡಿಯುತ್ತಾರೆ. ವಾದಿಗಳ ಪೂರ್ವಿಕರಾದ ಚನ್ನಪ್ಪನ ಮಕ್ಕಳಾದ ಮೋಟಯ್ಯ, ನರಸಿಂಹಯ್ಯ, ಐಯ್ಯಣ್ಣ, ಚಲುವಯ್ಯರವರು ವಿಭಾಗ ಮಾಡಿಕೊಂಡಿದ್ದು ವಿಭಾಗಾನುಸಾರ ಅವರವರ ಹೆಸರಿಗೆ ದಾವಾ ಸ್ವತ್ತಿನ ಖಾತೆಯು 2005 - 06 ನೇ ಸಾಲಿನ ತನಕ ಅವರ ಹೆಸರಿನಲ್ಲಿತ್ತು ಎಂದು ತೋರಿಸಲು ತಾವೇನಾದರೂ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು 1999 - 2000 ತನಕ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ತಾವು

**ಓ ಎಸ್ ನಂಃ 116/2016**

**ಡಿ ಡಬ್ಲ್ಯೂ ಃ 1**

ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಯಾವುದೆ ದಾಖಲಾತಿಯಲ್ಲಿ ಚನ್ನಯ್ಯನ 4 ಮಕ್ಕಳು ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ಚನ್ನಪ್ಪ ಬಿನ್ ಐಯ್ಯಣ್ಣಪ್ಪ ನವರ ಹೆಸರಿನಲ್ಲಿದ್ದ 2 ಎಕರೆ 34 ಗುಂಟೆ ಪೈಕಿ 1 ಎಕರೆ ಜಮೀನನ್ನು ತಾವು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುವ ಬಗ್ಗೆ ಚನ್ನಪ್ಪ ಬಿನ್ ಐಯ್ಯಣ್ಣಪ್ಪನವರು ಇದೇ ನ್ಯಾಯಾಲಯದಲ್ಲಿ ತಮ್ಮ ವಿರುದ್ಧ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಮೋಸದಿಂದ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸಿದ ನಂತರ ನಿಡಿ 7 ರ ದಾಖಲಾತಿಯು ತಮ್ಮ ಚಿತಾವಣೆ ಮೇರೆಗೆ ಸೃಷ್ಟಿ ಆಗಿದೆ ಎಂದರೆ ಸರಿಯಲ್ಲ. ತಾವು ದಾವಾ ಸ್ವತ್ತಿನ ಖಾತೆಯನ್ನು ಮಾಡಿಸಿಕೊಳ್ಳುವ ಸಮಯಕ್ಕೆ ದಾವಾ ಸ್ವತ್ತಿನ ಖಾತೆಯು ವಾದಿಯ ಹೆಸರಿನಲ್ಲಾಗಲಿ ಅಥವಾ ಆಕೆಯ ಗಂಡ ಅಥವಾ ಅವರ ಮಾವನ ಹೆಸರಿನಲ್ಲಿರಲಿಲ್ಲ ಎಂದರೆ ಸಾಕ್ಷಿಯು ಅವರು ದಾವಾ ಸ್ವತ್ತಿನ ಅನುಭವದಲ್ಲಿರುತ್ತಾರೆ ಆದರೆ ಖಾತೆಯನ್ನು ಮಾಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 80 ರ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವುದಕ್ಕಿಂತ ಮುಂಚೆ ಸದರಿ ದಾಖಲಾತಿಯನ್ನು ಓದಿ ತಿಳಿದುಕೊಂಡಿರುತ್ತೀರ ಎಂದರೆ ಸಾಕ್ಷಿಯು ಓದಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**